# ಕುಂದಾನಗರಿ ಬೆಳಗಾವಿ ಪ್ರದೇಶದ ಪಾರಂಪರಿಕ ತಾಣಗಳ ಸಂರಕ್ಷಣೆ

ರವಿ ಪಾಟೀಲ್
ಸಹಾಯಕ ಪ್ರಾಧ್ಯಾಪಕರು, ಇತಿಹಾಸ ವಿಭಾಗ, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಹುಕ್ಕೇರಿ, ತಾ: ಹುಕ್ಕೇರಿ, ಜಿ: ಬೆಳಗಾವಿ.

DOI: https://doi.org/10.5281/zenodo.17296741

## ABSTRACT:

ಬೆಳಗಾವಿ ಜಿಲ್ಲೆ ಐತಿಹಾಸಿಕವಾಗಿ ಹಾಗೂ ಸಾಂಸ್ಕೃತಿಕವಾಗಿ ಸಮೃದ್ಧ ಪ್ರದೇಶವಾಗಿದೆ. ಕುಂದಾನಗರಿ ಬೆಳಗಾವಿ ಪ್ರದೇಶವು ಕರ್ನಾಟಕದ ಐತಿಹಾಸಿಕ ಹಾಗೂ ಸಾಂಸ್ಕೃತಿಕ ಪಟಲದಲ್ಲಿ ವಿಶಿಷ್ಟ ಸ್ಥಾನ ಪಡೆದಿದೆ. ಈ ಪ್ರದೇಶವು ಕದಂಬರು, ಚಾಲುಕ್ಯರು, ರಾಷ್ಟ್ರಕೂಟರು, ಬಹಮನಿಗಳು, ಆದಿಲ್ ಶಾಹಿಗಳು, ಮರಾಠರು ಮತ್ತು ಬ್ರಿಟಿಷರು ಮುಂತಾದ ಅನೇಕ ರಾಜವಂಶಗಳ ಪ್ರಭಾವಕ್ಕೆ ಸಾಕ್ಷಿಯಾಗಿದೆ. "ಕುಂದಾನಗರಿ" ಎಂದು ಪ್ರಸಿದ್ಧಿಯಾದ ಈ ಪ್ರದೇಶವು ಹಳೆಯ ಕೋಟೆ, ದೇವಸ್ಥಾನಗಳು, ಜೈನ ಬಸದಿಗಳು, ಮಸೀದಿಗಳು, ಸಮಾಧಿಗಳು, ಶಾಸನಗಳು ಹಾಗೂ ವಿವಿಧ ಪಾರಂಪರಿಕ ಕಟ್ಟಡಗಳ ಮೂಲಕ ತನ್ನ ವೈಶಿಷ್ಟ್ಯವನ್ನು ಉಳಿಸಿಕೊಂಡಿದೆ. ಇವು ಕೇವಲ ಕಲ್ಲು–ಮಣ್ಣಿನ ಸ್ಮಾರಕಗಳಲ್ಲ, ಬದಲಿಗೆ ಭೂತಕಾಲದ ವೈಭವ, ಸಮಾಜದ ಧಾರ್ಮಿಕ–ಸಾಂಸ್ಕೃತಿಕ ಸಹಬಾಳ್ವೆ ಹಾಗೂ ಜನಜೀವನದ ಸಾಕ್ಷಿಗಳಾಗಿವೆ. ಆದರೆ ಆಧುನಿಕೀಕರಣ, ನಿರ್ಲಕ್ಷ್ಯ , ಅರಣ್ಯವಿಸ್ತರಣೆ, ಅಕ್ರಮ ನಿರ್ಮಾಣ ಹಾಗೂ ಪ್ರಕೃತಿ ವಿಕೋಪಗಳ ಪರಿಣಾಮವಾಗಿ ಅನೇಕ ಪಾರಂಪರಿಕ ತಾಣಗಳು ನಾಶದ ಅಂಚಿನಲ್ಲಿವೆ.

## KEYWORDS:

ಪಾರಂಪರಿಕ ತಾಣಗಳು, ಬೆಳಗಾವಿ ಕೋಟೆ, ಕಮಲ ಬಸದಿ, ಸುಫಾ ಮಸೀದಿ.

### ಪೀಠಿಕೆ:

ಕುಂದಾನಗರಿ ಬೆಳಗಾವಿ ಪ್ರದೇಶವು ಕರ್ನಾಟಕದ ಉತ್ತರ ಭಾಗದಲ್ಲಿ ಐತಿಹಾಸಿಕವಾಗಿ ಹಾಗೂ ಸಾಂಸ್ಕೃತಿಕವಾಗಿ ಅತ್ಯಂತ ಮಹತ್ವ ಪಡೆದ ಪ್ರದೇಶವಾಗಿದೆ. ಈ ಪ್ರದೇಶವು ಕದಂಬರು, ಚಾಲುಕ್ಯರು, ರಾಷ್ಟ್ರಕೂಟರು, ಬಹಮನಿಗಳು, ಆದಿಲ್‌ಶಾಹಿಗಳು, ಮರಾಠರು ಮತ್ತು ಬ್ರಿಟಿಷರು ಮುಂತಾದ ಅನೇಕ ರಾಜವಂಶಗಳ ಆಡಳಿತವನ್ನು ಅನುಭವಿಸಿದ್ದು, ಪ್ರತಿಯೊಂದು ವಂಶವೂ ತನ್ನದೇ ಆದ ಸಾಂಸ್ಕೃತಿಕ, ಧಾರ್ಮಿಕ ಹಾಗೂ ವಾಸ್ತುಶಿಲ್ಪದ ಛಾಪನ್ನು ಈ ನೆಲದ ಮೇಲೆ ಬೀರಿದೆ. ಈ ಹಿನ್ನೆಲೆಯಲ್ಲಿ ಬೆಳಗಾವಿಯ ಪಾರಂಪರಿಕ ತಾಣಗಳು ಭೂತಕಾಲದ ಸಮಗ್ರ ಇತಿಹಾಸವನ್ನು ವಿವರಿಸುವ ಜೀವಂತ ಸಾಕ್ಷಿಗಳಾಗಿ ಪರಿಣಮಿಸಿವೆ. ಕೋಟೆಗಳು, ದೇವಾಲಯಗಳು, ಮಸೀದಿಗಳು, ಜೈನ ಬಸದಿಗಳು, ಶಾಸನಗಳು, ಸಮಾಧಿಗಳು, ಮೆಟ್ಟಿಲುಬಾವಿಗಳು ಮತ್ತು ವಸಾಹತುಶಾಹಿ ಕಾಲದ ಕಟ್ಟಡಗಳು ಇಂದಿಗೂ ಈ ನೆಲದ ವೈವಿಧ್ಯಮಯ ಇತಿಹಾಸವನ್ನು ಕಂಗೊಳಿಸುತ್ತಿವೆ.

### ಪ್ರದೇಶದ ಪರಿಚಯ:

ಬೆಳಗಾವಿ ನಗರವು ಕರ್ನಾಟಕ–ಮಹಾರಾಷ್ಟ್ರ ಮತ್ತು ಗೋವಾ ರಾಜ್ಯದ ಗಡಿಯಲ್ಲಿ ಪಶ್ಚಿಮ ಘಟ್ಟಗಳ ಬೆಟ್ಟಗಳ ಬಳಿ ಇದೆ. ಕೃಷಿ, ಬಾಕ್ಸೈಟ್ ಗಣಿಗಾರಿಕೆ, ಜವಳಿ, ಕುಂಬಾರಿಕೆ

ಉದ್ಯಮಕ್ಕೆ ಹೆಸರುವಾಸಿಯಾದ ಇದು ಉತ್ತರ ಕರ್ನಾಟಕದ ಶೈಕ್ಷಣಿಕ ಕೇಂದ್ರವೂ ಆಗಿದೆ. ಬ್ರಿಟಿಷ್ ಕಂಟೋನ್ಮೆಂಟ್ ನಗರವಾದ ಈ ನಗರವು ಕಂಟೋನ್ಮೆಂಟ್ ಮತ್ತು ಮಹಾನಗರಪಾಲಿಕೆ ಅಧಿಕಾರಿಗಳ ಅಡಿಯಲ್ಲಿ ಬರುತ್ತದೆ. ಕ್ರಿ.ಶ. 4ನೇ ಶತಮಾನದಿಂದಲೇ ಕದಂಬರು ಇಲ್ಲಿ ಆಳ್ವಿಕೆ ನಡೆಸಿದ್ದು, ಹಲಸಿ ಅವರ ಪ್ರಾಚೀನ ರಾಜಧಾನಿಯಾಗಿತ್ತು. ಇತಿಹಾಸದಲ್ಲಿ ಬೆಳಗಾವಿ ಕೋಟೆ, ಹಲಸಿ ಹಾಗೂ ಶಾಸನಗಳು, ದೇವಾಲಯಗಳು ಮತ್ತು ಪುರಾತತ್ವ ಅವಶೇಷಗಳು ಪ್ರಮುಖ ಸ್ಥಾನವನ್ನು ಹೊಂದಿವೆ. ಬ್ರಿಟಿಷರ ಕಾಲದಲ್ಲಿ ಬೆಳಗಾವಿಯನ್ನು "Bombay Presidency" ಗೆ ಸೇರಿಸಲಾಗಿತ್ತು. ನಂತರ ರಾಜ್ಯ ಪುನರ್‌ರಚನೆಯಾದಾಗ (1956) ಇದು ಕರ್ನಾಟಕ ರಾಜ್ಯಕ್ಕೆ ಸೇರಿತು.

**ಕೋಟೆಗಳು:**

ವೇದಗಳ ಕಾಲದಿಂದಲೂ ಸಹ ಭಾರತದಲ್ಲಿ ದುರ್ಗ ಎಂದರೆ ಭದ್ರಕೋಟೆ ಎಂದು ಕರೆಯಲಾಗುವ ಕೋಟೆಗಳನ್ನು ನಿರ್ಮಿಸಲಾಗುತ್ತಿತ್ತು. ಪ್ರಮುಖ ನಗರಗಳು, ರಾಜಧಾನಿಗಳು ಮತ್ತು ವಸಾಹತುಗಳನ್ನು ಒಳಗೊಂಡಂತೆ ಅನೇಕ ಕೋಟೆಗಳನ್ನು ನಿರ್ಮಿಸಲಾಗುತ್ತಿತ್ತು. ಕೋಟೆಗಳು ಸಾಮಾನ್ಯವಾಗಿ ರಕ್ಷಣಾ ಉದ್ದೇಶಗಳಿಗಾಗಿ ಮಾತ್ರವಲ್ಲದೆ, ಆಳುವ ಸಾಮ್ರಾಜ್ಯದ ಶಕ್ತಿಯನ್ನು ಚಿತ್ರಿಸಲು ಸಹ ಅಗತ್ಯವಾಗಿದ್ದವು. ಕೋಟೆ ಆವರಣಗಳು ಆಳುವ ಸಾಮ್ರಾಜ್ಯಗಳ ಐತಿಹಾಸಿಕ ಶಕ್ತಿ ಆಟ, ಹೋರಾಟ ಮತ್ತು ಬಲಕ್ಕೆ ಮತ್ತು ನಿರ್ದಿಷ್ಟ ಪ್ರದೇಶ ಅಥವಾ ನಗರದ ವಿವಿಧ ಯುಗಗಳಲ್ಲಿ ಚಾಲ್ತಿಯಲ್ಲಿರುವ ರಾಜಕೀಯ ಸನ್ನಿವೇಶಕ್ಕೆ ಸಾಕ್ಷಿಯಾಗಿದೆ. ಅವು ಸಮುದಾಯ ಜೀವನ ಮಾದರಿಗಳು, ಧಾರ್ಮಿಕ ನಂಬಿಕೆಗಳು, ಕೋಟೆಯಲ್ಲಿ ವಾಸಿಸುವ ಜನರ ಸಂತೋಷ ಮತ್ತು ದುಃಖಗಳ ಕಥೆಗಳನ್ನು ಸಹ ಹೇಳುತ್ತವೆ. ಕೋಟೆಗಳನ್ನು ಪೃಥ್ವಿದುರ್ಗ (ಅಥವಾ ಭೂವಿಕೋಟ ಅಂದರೆ ಭೂ ಕೋಟೆ), ಉರ್ವಿದುರ್ಗ (ವಿಶಾಲ ಕೋಟೆಗಳು), ದೇವದುರ್ಗ (ದೇವರ ಕೋಟೆ), ವನದುರ್ಗ (ಕಾಡಿನ ಕೋಟೆ), ಬರಿದುರ್ಗ (ದ್ವೀಪ ಕೋಟೆ) ಮತ್ತು ಗಿರಿದುರ್ಗ (ಬೆಟ್ಟದ ಕೋಟೆ) ಎಂದು ವರ್ಗೀಕರಿಸಲಾಗಿದೆ. (Sethi K 2007) ಭದ್ರತೆಗಾಗಿ ಭೂ ಕೋಟೆಗಳು ದೊಡ್ಡ ರಕ್ಷಣಾತ್ಮಕ ಗೋಡೆಗಳು, ಸುತ್ತಮುತ್ತಲಿನ ಕಂದಕ ಮತ್ತು ದೃಷ್ಟಿಗೋಚರವಾಗಿ ಸಂಪರ್ಕಿಸುವ ಎತ್ತರದ ಕೊತ್ತಲಗಳನ್ನು ಒಳಗೊಂಡಿವೆ. ಕೋಟೆ ಮತ್ತು ಕಂದಕವು ಅದರೊಳಗೆ ಒಂದು ನಗರವನ್ನು ಸುತ್ತುವರೆದಿದೆ. (R. De Souza Dec 2001)

**ಬೆಳಗಾವಿ ಕೋಟೆ:**

ಬ್ರಿಟಿಷ್ ಲೇಖಕ ಗಿಲ್‌ಮೋರ್ ಮೆಕೋರ್ಕೆಲ್ ತಮ್ಮ "ದಿ ಇಂಡಿಯನ್ ಆಂಟಿಕ್ವರಿ" ಕೃತಿಯಲ್ಲಿ, ಜೀರ್ಣಸಿತಪುರ ಅಥವಾ ವೇಣುಗ್ರಾಮ (ಈಗಿನ ಬೆಳಗಾವಿ ನಗರ)ವು ಹಳೆಯ ಬೆಳಗಾವಿ ಮತ್ತು ಶಹಾಪುರವನ್ನು ಒಳಗೊಂಡಿತ್ತು ಎಂದು ಉಲ್ಲೇಖಿಸಿದ್ದಾರೆ.

ಬೆಳಗಾವಿ ಊರಿನ ಪೂರ್ವಕ್ಕೆ ವರ್ತುಲಾಕಾರದಲ್ಲಿರುವ ಕೋಟೆ ಸುಭದ್ರವಾಗಿದೆ. ನೂರು ಎಕರೆ ಪ್ರದೇಶದಿಂದ ಆವೃತವಾಗಿ ನಗರದ ಪೂರ್ವದಿಕ್ಕಿಗೆ ಇರುವ ಕೋಟೆ ನೈಸರ್ಗಿಕ ಸೌಂದರ್ಯದಿಂದಾಗಿ ನಯನಮನೋಹರವಾಗಿದೆ. ಹಲವಾರು ರಾಜವಂಶಗಳ ಆಳ್ವಿಕೆಯ ಅವಧಿಯಲ್ಲಿ ವಿಕಸನ ಹೊಂದಿ ರಾಜಮನೆತನಗಳ ಏಳು-ಬೀಳುಗಳಿಗೆ ಮೂಕಸಾಕ್ಷಿಯಾಗಿರುವ ಬೆಳಗಾವಿ ಕೋಟೆ ಅರ್ಧವೃತ್ತಾಕಾರವಾಗಿದ್ದು, ಭವ್ಯ ಕಮಾನಿನ ಆಕಾರದ ಪ್ರವೇಶದ್ವಾರವನ್ನೊಳಗೊಂಡಿದೆ. ಇದು ಆಳವಾದ ಕಂದಕದಿಂದ ಸುತ್ತುವರೆದಿದೆ. ಭವ್ಯವಾದ ಕೋಟೆಗೋಡೆಯ ಮೇಲೆ ದೇವಾಲಯ, ಬಸದಿ, ವೀರಗಲ್ಲುಗಳ ತುಂಡುಗಳು

ಕಾಣಸಿಗುತ್ತವೆ. ಕೋಟೆಯ ಉತ್ತರ ದಿಕ್ಕಿನ ಗೋಡೆಯ ಮೇಲಿರುವ ಆರು ಸಾಲುಗಳ ಪರ್ಶಿಯನ್ ಭಾಷೆಯ ಶಾಸನ ಹಿಜಿರಾ ಶಕೆ 937 (1530 ಕ್ರಿ.ಶ.) ರಲ್ಲಿ ಯಾಕೂಬ ಖಾನ್ ಎಂಬಾತ ಪುನರ್ ನಿರ್ಮಾಣ ಕಾರ್ಯ ಪೂರ್ಣಗೊಳಿಸಿದ ಬಗ್ಗೆ ಉಲ್ಲೇಖಿಸುತ್ತದೆ. 1000 ಗಜ ಉದ್ದ ಮತ್ತು 800 ಗಜ ಅಗಲವಿರುವ ಕೋಟೆ ಅಂಡಾಕಾರದಲ್ಲಿದೆ. 34 ಅಡಿ ಆಳದ ಕಂದಕದಿಂದಾಗಿ ಈ ಕೋಟೆ ವಿಶೇಷ ಭದ್ರತೆ ಪಡೆದಿದೆ. ಕೋಟೆಗೆ ಎರಡು ಪ್ರವೇಶ ದ್ವಾರಗಳಿದ್ದು, ಮುಖ್ಯ ದ್ವಾರ ಉತ್ತರಕ್ಕಿದ್ದು, ಇನ್ನೊಂದು ಪೂರ್ವಕ್ಕಿದೆ. ಕೋಟೆಯ ದೇವತೆ ಎನಿಸಿದ ದುರ್ಗಾದೇವಿಯ ಮೂರ್ತಿ ಮುಖ್ಯದ್ವಾರದ ಪ್ರವೇಶದಲ್ಲಿದೆ. ಎರಡು ದ್ವಾರಗಳು ಮೇಲೆ ಇರುವ ಆರು ಭದ್ರತೆ ಪಡೆದಿದೆ. ರಕ್ಷಣಾ ದ್ವಾರಗಳು 12 ಅಡಿ ಎತ್ತರವಾಗಿದ್ದು ಕಮಾನಿನ ಆಕಾರದಲ್ಲಿವೆ. ಕೋಟೆಯ ಒಳಭಾಗದಲ್ಲಿ ಭೂಗರ್ಭದಲ್ಲಿ ಅನೇಕ ರಹಸ್ಯ ಮಾರ್ಗಗಳಿದ್ದು, ಒಂದು ಮಾರ್ಗ ಯಳ್ಳೂರು ಸೇರುತ್ತದೆ. 1818ರಲ್ಲಿ ಕೋಟೆ ಬ್ರಿಟಿಷರ ವಶವಾದ ನಂತರ ಒಂದು ಅಂತಸ್ತಿನ ಎರಡು ಕಟ್ಟಡಗಳನ್ನು ನಿರ್ಮಿಸಿ ಬರಾಕುಗಳನ್ನಾಗಿ ಉಪಯೋಗಿಸಿದರು. ಈ ಕೋಟೆ ಅವನತಿಯ ಹಾದಿಯಲ್ಲಿದ್ದರೂ ಇತಿಹಾಸದ ಏಳು–ಬೀಳುಗಳ ಗತವೈಭವದ ಮೂಕಸಾಕ್ಷಿಯಾಗಿದೆ.

**ಕೋಟೆಯ ಸದ್ಯದ ಸ್ಥಿತಿ:**

1. ಶಿಥಿಲಗೊಂಡ ಪರಿಸ್ಥಿತಿಗಳಲ್ಲಿ ಕೋಟೆಯ ಗೋಡೆ, ಗೋಡೆಗಳು ಮತ್ತು ಕೊತ್ತಲಗಳಲ್ಲಿ ಕಳೆಗಳು, ಶಿಲೀಂಧ್ರಗಳು (ಹಸಿರು ಪಾಚಿ) ಮತ್ತು ಬಿರುಕುಗಳು ಬೆಳೆಯುತ್ತಿವೆ.
2. ಕೋಟೆಯ ಸುತ್ತಲಿನ ಕಂದಕ (moat) ವನ್ನು ಕಸದ ತ್ಯಾಜ್ಯ, ನೀರು ನಿಲ್ಲುವ ಸ್ಥಳ ಹಾಗೂ ಹಿಂಬಾಗಿಲಿನ ಕಸದ ಮೈದಾನವನ್ನಾಗಿ ಬಳಸಲಾಗುತ್ತಿದೆ.
3. ಸಾರ್ವಜನಿಕರಿಗೆ ಕೋಟೆಯ ಬಹುತೇಕ ಭಾಗ ಮುಚ್ಚಲ್ಪಟ್ಟಿದ್ದು, ಕೇವಲ ದುರ್ಗಾ ದೇವಾಲಯ ಹಾಗೂ ಕಮಲ ಬಸದಿ ಮಾತ್ರ ಸೀಮಿತ ಪ್ರವೇಶಕ್ಕೆ ತೆರೆದಿವೆ.
4. ಕೋಟೆಯ ಸುತ್ತಮುತ್ತ ಅಕ್ರಮ ಮತ್ತು ಅರಾಜಕ ನಿರ್ಮಾಣಗಳು (ಗುಡಿಸಲು ಕಾಲೋನಿಗಳು, ಸಣ್ಣ ಕೈಗಾರಿಕೆಗಳು, ಬಹುಮಹಡಿ ಕಟ್ಟಡಗಳು) ಹೆಚ್ಚಾಗುತ್ತಿವೆ.
5. ಹಳೆಯ ಮರಗಳನ್ನು ಕಡಿಯುವುದರಿಂದ ಪರಿಸರ ಪರಂಪರೆಗೆ ಹಾನಿಯಾಗಿದೆ.
6. ನಿರ್ಲಕ್ಷಿತ ವಾಸ್ತುಶಿಲ್ಪ ಪರಂಪರೆ ವಿಶೇಷವಾಗಿ ನಿವಾಸ.

**ಜೈನ ಬಸದಿಗಳು:**

ಕಲ್ಯಾಣ ಚಾಲುಕ್ಯರ ಕಾಲದ ಮೂರು ಜೈನ ಬಸದಿಗಳಿದ್ದು ಅದರಲ್ಲಿ ಒಂದನ್ನು ರಸ್ತೆ ನಿರ್ಮಾಣ ಕಾಲದಲ್ಲಿ ನೆಲಸಮ ಮಾಡಲಾಯಿತು. ಇನ್ನೊಂದು ಬಸದಿಯ ಅವಶೇಷಗಳು ಕಾಣಸಿಗುತ್ತವೆ. 42 ಅಡಿ ಅಗಲದ ಮುಖ ಮಂಟಪವನ್ನು ಹೊಂದಿದ ಬಸದಿ ಈಗ ಹಾಳುಬಿದ್ದಿದೆ. ಈ ಬಸದಿಯಲ್ಲಿ 32 ಚದರ ಅಡಿಯ ಮಂಟಪವಿದ್ದು, 16 ಸ್ತಂಭಗಳು ಮತ್ತು 16 ಅರ್ಧಗಂಬಗಳಿವೆ. ಮುಖ ಮಂಟಪದಲ್ಲಿ ಶಿಲ್ಪ ಪಟ್ಟಿಕೆಯಿದ್ದು ಸಂಗೀತ, ನೃತ್ಯ, ಗಾಯನ ನಿರತ ಶಿಲ್ಪಗಳಿವೆ. ಇದನ್ನು ಈಗ ಸಲಕರಣೆಗಳನ್ನು ಇಡುವ ಕೊಠಡಿಯಾಗಿ ಉಪಯೋಗಿಸಲಾಗುತ್ತಿದೆ.

**ಕಮಲ ಬಸದಿ:**

ಮುಖ ಮಂಟಪದ ಛತ್ತಿನಲ್ಲಿ ಕಮಲದ ಆಕಾರದಲ್ಲಿರುವ ಮೇಲ್ಛಾವಣಿಯಿಂದಾಗಿ ಈ ಹೆಸರು ಕಮಲ ಬಸದಿಗೆ ಬಂದಿತು. ನಾಲ್ಕನೆಯ ರಟ್ಟ ಕಾರ್ತವೀರ್ಯನ ಮಂತ್ರಿ

ಬಾಚನಿಂದ 1205 ರಲ್ಲಿ ನಿರ್ಮಾಣಗೊಂಡ ಕಮಲ ಬಸದಿ ಮೂರು ಪ್ರವೇಶ ದ್ವಾರವುಳ್ಳ ಮುಖಮಂಟಪ, ನವರಂಗ ಸುಕನಾಸ/ಅಂತರಾಳ ಮತ್ತು ಗರ್ಭಗೃಹ ಹೊಂದಿದೆ. ಇಲ್ಲಿಯ ಕಂಬಗಳ ಕಲ್ಲು ಅತ್ಯಂತ ನುಣುಪಾಗಿದ್ದು ಆಯಸ್ಕಾಂತದಂತೆ ಆಕರ್ಷಿಸುವ ಶಕ್ತಿ ಹೊಂದಿದೆ. ಕಮಲ ಬಸದಿ ಕ್ರಿ.ಶ. 1204ರಲ್ಲಿ ರಟ್ಟ (Ratta) ವಂಶದ ಮುಖ್ಯಸ್ಥರಾದ ಬೀಚಿರಾಜ (ಅಥವಾ ಬೀಚಿರಾಜ ಒಡೆಯ) ಅವರ ಕಾಲದಲ್ಲಿ ನಿರ್ಮಿಸಲ್ಪಟ್ಟಿತು ಎಂದು ಶಾಸನಗಳು ತಿಳಿಸುತ್ತವೆ. ಈ ಬಸದಿ ಜೈನ ತೀರ್ಥಂಕರರಾದ ನೇಮಿನಾಥ (22ನೇ ತೀರ್ಥಂಕರ) ರಿಗೆ ಸಮರ್ಪಿತವಾಗಿದೆ. ಗರ್ಭಗೃಹದ ದ್ವಾರ ಅಲಂಕಾರಪೂರಿತವಾಗಿದ್ದು, ಸಪ್ತಶಾಖೆಗಳನ್ನು ಒಳಗೊಂಡಿದ್ದು, ಲಲಾಟದಲ್ಲಿ ಜಿನಬಿಂಬವಿದೆ. ಆರಳಿದ ಕಮಲದ ಪದಕವನ್ನು ಕೇಂದ್ರದಲ್ಲಿ ಹೊಂದಿದ ಮೇಲ್ಚಾವಣಿ ಆಕರ್ಷಕವಾಗಿದೆ.

**ಕಮಲ ಬಸದಿಯ ಸದ್ಯದ ಸ್ಥಿತಿ:**

1. ಬಸದಿ ಇನ್ನೂ ಸಂಪೂರ್ಣ ಸ್ಥಿರವಾಗಿ ಉಳಿದಿದ್ದರೂ, ಶಿಲಾಶಿಲ್ಪಗಳ ಮೇಲೆ ಹಳೆಯತನದ ಗುರುತುಗಳು ಸ್ಪಷ್ಟವಾಗಿ ಕಾಣಿಸುತ್ತಿವೆ.
2. ಕೆಲವು ಕಂಬಗಳು ಮತ್ತು ಗೋಡೆಗಳ ಮೇಲೆ ಆವರಣದಲ್ಲಿ ಹಸಿರು ಶಿಲೀಂಧ್ರ (ಹಸಿರು ಪಾಚಿ) ಗಳ ಬೆಳವಣಿಗೆ ಕಂಡುಬರುತ್ತಿದೆ. ಬಸದಿ ಸುತ್ತಲಿನ ಕಲ್ಲಿನ ನೆಲ ಭಾಗಶಃ ಹಾನಿಗೊಂಡಿದೆ.
3. ಬಸದಿಗೆ ನಿಯಮಿತವಾಗಿ ಸ್ವಚ್ಛತೆ ಕಾರ್ಯ ನಡೆಯುತ್ತಿದ್ದರೂ, ಸಮಗ್ರ ವೈಜ್ಞಾನಿಕ ಸಂರಕ್ಷಣೆ ಇನ್ನೂ ಕೈಗೊಳ್ಳಲಾಗಿಲ್ಲ.
4. ಕೋಟೆಯ ಸುತ್ತಮುತ್ತ ನಡೆದಿರುವ ಅಕ್ರಮ ಕಟ್ಟಡಗಳು ಹಾಗೂ ನಿರ್ಲಕ್ಷ್ಯದಿಂದ ಬಸದಿಯ ಐತಿಹಾಸಿಕ ಮೌಲ್ಯ ಕುಗ್ಗುತ್ತಿದೆ.

**ಸುಫಾ ಮಸೀದಿ:**

ಕೋಟೆಯ ಆವರಣದೊಳಗೆ ಅದಿಲಶಾಹಿ ಗವರ್ನರ್ ಅಸದಖಾನನಿಂದ ನಿರ್ಮಿಸಲ್ಪಟ್ಟ ಮಸಜಿದ್–ಇ–ಸಾಫಾ 81 ಅಡಿ ಎತ್ತರ ಮತ್ತು 58 ಅಡಿ ಅಗಲ ಇದೆ. ಈ ಮಸೀದಿಯ ಸ್ತಂಭಗಳ ಮೇಲೆ ಯಾದವ ಕಾಲೀನ ಶೈವಾಲಯದ ಕುರುಹುಗಳನ್ನು ಕಾಣಬಹುದು. ಒಂದು ಸ್ತಂಭದ ಮೇಲೆ ದೇವನಾಗರಿ ಲಿಪಿ ಮತ್ತು ಕನ್ನಡ ಭಾಷೆಯಲ್ಲಿರುವ ಶಾಸನ ಶೈವಾಲಯಕ್ಕೆ ದತ್ತಿ ಕೊಟ್ಟ ಗ್ರಾಮಗಳನ್ನು ಉಲ್ಲೇಖಿಸುತ್ತದೆ. ಅದೇ ಕಂಬದ ಮೇಲ್ಭಾಗದಲ್ಲಿ ಕುರಾನಿನಿಂದ ಆಯ್ದ ಪದ್ಯಗಳು ಪರ್ಶಿಯನ್ ಭಾಷೆಯಲ್ಲಿವೆ. ಮಸೀದಿಯ ಪ್ರವೇಶದ್ವಾರದ ಮೇಲ್ಭಾಗದಲ್ಲಿರುವ ಅಸ್ಪಷ್ಟವಾಗಿರುವ ಪರ್ಶಿಯನ್ ಶಾಸನ 1511–1549 ರಲ್ಲಿ ಆಳಿದ ಅಸದಖಾನದಿಂದ ಇದು ನಿರ್ಮಾಣವಾಯಿತೆಂದು ತಿಳಿಸುತ್ತದೆ. 200 ಮಿನಾರಗಳು, ಗುಮ್ಮಟಗಳು, ಕಮಾನುಗಳು, ಗೋಲಾಕಾರದ ಕಂಬಗಳು – ಇವು ಹಿಂದೂ–ಮುಸ್ಲಿಂ ಶೈಲಿಯ ಸಮ್ಮಿಶ್ರಣ ವಾಸ್ತುಶಿಲ್ಪ ಶೈಲಿಯನ್ನು ಪ್ರತಿಬಿಂಬಿಸುತ್ತವೆ. ಇದರ ದಕ್ಷಿಣ ದಿಕ್ಕಿನಲ್ಲಿ ಅಸದ್‌ಖಾನ ಅರಮನೆ, ನಗಾರಿಖಾನಾ, ನೌಬತ್‌ಖಾನಾ, ಶಾಹಿ ಪಾಕಶಾಲೆ ಮುಂತಾದ ಕಟ್ಟಡಗಳಿದ್ದುವೆಂದು ಅವುಗಳನ್ನು ಬ್ರಿಟಿಷರು ನೆಲಸಮ ಮಾಡಿದರೆಂದು ಕ್ಯಾಂಪಬೆಲ್ ತಿಳಿಸುತ್ತಾರೆ. 1857 ರ ದಂಗೆಯಲ್ಲಿ ಮಸೀದಿಯನ್ನು ಸಾರ್ವಜನಿಕರಿಗೆ ಮುಚ್ಚಲಾಗಿತ್ತು (ಬ್ರಿಟಿಷ್ ಶಸ್ತ್ರಾಸ್ತ್ರ ಸಂಗ್ರಹಣೆಯ ಕೊಠಡಿ ಪಕ್ಕದಲ್ಲಿಯೇ ಇದ್ದುದರಿಂದ), ಈಗ ಪ್ರತಿ ಶುಕ್ರವಾರ ಮತ್ತು ರಮಜಾನ್ ತಿಂಗಳಲ್ಲಿ ಮಾತ್ರ ಪ್ರಾರ್ಥನೆಗೆ ತೆಗೆದಿರುತ್ತದೆ.

**ಪಾರಂಪರಿಕ ತಾಣಗಳ ಸಂರಕ್ಷಣಾ ವಿಧಾನಗಳು:**

ಭಾರತದಂತೆಯೇ ಕರ್ನಾಟಕದಲ್ಲಿಯೂ ಹಲವಾರು ಅಮೂಲ್ಯ ಸ್ಮಾರಕಗಳಿವೆ. ಅದರಲ್ಲೂ ಬೆಳಗಾವಿ ಪ್ರದೇಶದಲ್ಲಿ ಹಲವಾರು ಪಾರಂಪರಿಕ ತಾಣಗಳನ್ನು ನೋಡಬಹುದು ಅವುಗಳೆಂದರೆ, ಬೆಳಗಾವಿ ಕೋಟೆ, ಕಮಲ ಬಸದಿ, ಸುಪಾ ಇತ್ಯಾದಿ. ಇವುಗಳು ಯುನೆಸ್ಕೋ ವಿಶ್ವ ಪರಂಪರೆ ತಾಣಗಳಾಗಿಯೂ ಗುರುತಿಸಲ್ಪಟ್ಟಿವೆ. ಇಂತಹ ಸ್ಮಾರಕಗಳನ್ನು ಸಂರಕ್ಷಿಸುವುದು ನಮ್ಮೆಲ್ಲರ ಜವಾಬ್ದಾರಿಯಾಗಿದೆ.

1. ಶುದ್ಧೀಕರಣ: ಸ್ಮಾರಕಗಳ ಮೇಲೆ ಜಮಾಯಿಸುವ ಧೂಳು, ಶೈವಲ, ಶಿಲೀಂಧ್ರಗಳನ್ನು ನಿಯಮಿತವಾಗಿ ತೆಗೆದುಹಾಕುವುದು. ರಾಸಾಯನಿಕ ವಸ್ತುಗಳನ್ನು ಹಾನಿ ಉಂಟಾಗದಂತೆ ವೈಜ್ಞಾನಿಕ ರೀತಿಯಲ್ಲಿ ಶುದ್ಧೀಕರಿಸುವುದು. ಉದಾಹರಣೆಗೆ: ಕಮಲ ಬಸದಿ ಹಾಗೂ ಕೋಟೆಯ ಭಾಗಗಳನ್ನು ನಿಯಮಿತವಾಗಿ ಸ್ವಚ್ಛಗೊಳಿಸುವುದು.
2. ರಾಸಾಯನಿಕ ಸಂರಕ್ಷಣೆ: ಕಲ್ಲು, ಲೋಹ, ಮರ, ಬಣ್ಣ ಇತ್ಯಾದಿ ವಸ್ತುಗಳ ದೀರ್ಘಾಯುಷ್ಯಕ್ಕಾಗಿ ವಿಶೇಷ ಸಂರಕ್ಷಕ ದ್ರವ್ಯಗಳನ್ನು ಬಳಕೆ. ಕಲ್ಲಿನ ಮೇಲಿನ ಹಾಳು ತಡೆಯಲು ಪಾರದರ್ಶಕ ಲೇಪನ ಬಳಸುವುದು. ಹಾಳಾಗಿರುವ ಚಿತ್ರಗಳಿಗೆ ತೇವಾಂಶ ತಡೆಗಟ್ಟುವ ರಾಸಾಯನಿಕವನ್ನು ಬಳಕೆ.
3. ಭೌತಿಕ ಬಲವರ್ಧನೆ: ಗೋಡೆಗಳು, ಕಂಬಗಳು, ಗೋಪುರಗಳು ದುರ್ಬಲಗೊಂಡಾಗ ಬಲವರ್ಧನೆ ಮಾಡುವುದು. ಮೂರ್ತಿಗಳು ಅಥವಾ ಶಿಲ್ಪಗಳು ಕುಸಿಯದಂತೆ ಬಲವಾದ ಆಧಾರವನ್ನು ನಿರ್ಮಿಸುವುದು. ಹಾಳಾದ ಭಾಗಗಳನ್ನು ಪುನಃ ಕಟ್ಟಿ ಹಾಕುವುದು. ಉದಾಹರಣೆಗೆ: ಕಮಲ ಬಸದಿ ಹಾಳಾದ ಭಾಗಗಳನ್ನು ಮೂಲ ಆಕೃತಿಗೆ ದಕ್ಕೆಯಾಗದಂತೆ ಪುನಃ ಕಟ್ಟುವುದು.
4. ಪರಿಸರ ನಿಯಂತ್ರಣ: ನೀರಿನ ನಾಲೆಗಳು ಮಾಡಿ ಮಳೆನೀರಿನ ಸೋರಿಕೆಯನ್ನು ತಡೆಯುವುದು. ಸ್ಮಾರಕಗಳ ಬಳಿ ವಾಹನ ಸಂಚಾರವನ್ನು ಕಡಿಮೆ ಮಾಡುವುದು. ಮರಗಳನ್ನು ನೆಡುವ ಮೂಲಕ ಪರಿಸರವನ್ನು ತಂಪಾಗಿಡುವುದು. ಪ್ಲಾಸ್ಟಿಕ್ ಹಾಗೂ ಕಸದಿಂದ ಮುಕ್ತ ವಲಯಗಳನ್ನು ನಿರ್ಮಿಸುವುದು.
5. ಕಾನೂನು ಮತ್ತು ನಿಯಮಾವಳಿ: ಪುರಾತತ್ವ ಸರ್ವೇಕ್ಷಣ ಇಲಾಖೆ (ASI) ಮತ್ತು ರಾಜ್ಯ ಪುರಾತತ್ವ ಇಲಾಖೆ ಸಂರಕ್ಷಣಾ ಕಾರ್ಯಗಳನ್ನು ನೋಡಿಕೊಳ್ಳುತ್ತವೆ. 1958ರ ಪ್ರಾಚೀನ ಸ್ಮಾರಕಗಳು ಮತ್ತು ಪುರಾತತ್ವ ಸ್ಥಳಗಳು ಕಾಯ್ದೆ ಜಾರಿಯಲ್ಲಿದೆ. ಸ್ಮಾರಕಗಳ ಹಾನಿಗೆ ಕಾರಣರಾದವರಿಗೆ ಕಠಿಣ ಶಿಕ್ಷೆ ನೀಡಲಾಗುತ್ತದೆ. ಇದರ ಮೂಲಕ ಪಾರಂಪರಿಕ ತಾಣಗಳನ್ನು ರಕ್ಷಿಸಲಾಗುತ್ತದೆ.
6. ಸಾಮಾಜಿಕ ಜಾಗೃತಿ: ಶಾಲೆ, ಕಾಲೇಜುಗಳಲ್ಲಿ ಸ್ಮಾರಕಗಳ ಮಹತ್ವದ ಬಗ್ಗೆ ಪಾಠ ಮಾಡಬೇಕು. ಪ್ರವಾಸಿಗರಿಗೆ “ಸ್ಮಾರಕಗಳನ್ನು ಹಾನಿಗೊಳಿಸಬೇಡಿ” ಎಂಬ ಫಲಕಗಳನ್ನು ಅಳವಡಿಸಬೇಕು. ಸ್ಥಳೀಯರು ಮತ್ತು ಪ್ರವಾಸಿಗರು ಸೇರಿ ಸ್ವಚ್ಛತಾ ಅಭಿಯಾನಗಳನ್ನು ನಡೆಸಬೇಕು.
7. ಆಧುನಿಕ ತಂತ್ರಜ್ಞಾನ: ಲೇಸರ್ ಸ್ಕ್ಯಾನಿಂಗ್ ಮೂಲಕ ಸ್ಮಾರಕದ ನಿಖರ ಅಳತೆ ಪಡೆದು ದಾಖಲಿಸುವುದು. 3D ಮಾದರಿ (Digital Archive) ನಿರ್ಮಿಸಿ ಮುಂದಿನ ಪೀಳಿಗೆಗೂ ಸಂರಕ್ಷಿಸುವುದು. ಡ್ರೋನ್‌ಗಳ ಮೂಲಕ ನಿಗಾವ್ಯವಸ್ಥೆ ಮಾಡುವುದು. ಇಂಟರ್ನೆಟ್ ಮೂಲಕ ಜನರಿಗೆ ಸ್ಮಾರಕಗಳ ಬಗ್ಗೆ ಮಾಹಿತಿ ನೀಡುವುದು.

8. ಸಾರ್ವಜನಿಕ–ಖಾಸಗಿ ಸಹಭಾಗಿತ್ವ: ಕಂಪನಿಗಳು "Adopt a Heritage" ಯೋಜನೆಗಳ ಮೂಲಕ ಸ್ಮಾರಕಗಳ ಸಂರಕ್ಷಣೆಗೆ ಸಹಕರಿಸಬಹುದು. ಪ್ರವಾಸೋದ್ಯಮ ಇಲಾಖೆ, ಎನ್‌ಜಿಓಗಳು, ಸ್ಥಳೀಯ ಸಂಘಟನೆಗಳು ಸರ್ಕಾರದೊಂದಿಗೆ ಕೈಜೋಡಿಸಬೇಕು.

**ಪುನರ್‌ನಿರ್ಮಾಣ ಹಾಗೂ ಸಂರಕ್ಷಣಾ ಶಿಫಾರಸುಗಳು:**

ಬೆಳಗಾವಿ ಕೋಟೆ ಮತ್ತು ಕೋಟೆಯೊಳಗಿನ ಕಮಲ ಬಸದಿ, ಸುಫಾ ಮಸೀದಿ ಹಾಗೂ ಯಳ್ಳೂರ ಕೋಟೆ ಇವುಗಳೆಲ್ಲವು ಸಹ ಪ್ರಮುಖ ಪಾರಂಪರಿಕ ತಾಣಗಳಾಗಿವೆ. ಇದರ ಸೌಂದರ್ಯ ಹಾಗೂ ಇತಿಹಾಸವನ್ನು ಉಳಿಸಲು ಈ ಕೆಳಗಿನ ಅಂಶಗಳನ್ನು ಸಂರಕ್ಷಣಾ ಶಿಫಾರಸುಗಳನ್ನು ಮಾಡಲಾಗಿದೆ. ಅವುಗಳು ಇಂತಿವೆ:

- ಧಾರ್ಮಿಕ ಹಾಗೂ ಸಾಂಸ್ಕೃತಿಕ ಸಂರಕ್ಷಣೆ: ಜೈನ ಸಮುದಾಯದ ಸಹಕಾರದಿಂದ ಧಾರ್ಮಿಕ ಕಾರ್ಯಕ್ರಮಗಳನ್ನು ನಿರಂತರವಾಗಿ ನಡೆಸಲು ಅನುಕೂಲ ಕಲ್ಪಿಸಬೇಕು. ಜೈನ ಶಾಸ್ತ್ರ ಮತ್ತು ಇತಿಹಾಸದ ಕುರಿತು ಸಾಂಸ್ಕೃತಿಕ ಪ್ರದರ್ಶನಗಳು, ಉಪನ್ಯಾಸಗಳು ಕೋಟೆಯೊಳಗೆ ಆಯೋಜಿಸಬಹುದು.
- ಸಾರ್ವಜನಿಕ ಪ್ರವೇಶ ಮತ್ತು ಪ್ರವಾಸೋದ್ಯಮ: ಕೋಟೆಯೊಳಗಿನ ಕಮಲ ಬಸದಿ ಪ್ರವೇಶವನ್ನು ನಿಯಂತ್ರಿತ ಪ್ರವಾಸೋದ್ಯಮಕ್ಕೆ ತೆರೆಯಬೇಕು. ಸ್ಥಳೀಯ ಪ್ರವಾಸಿಗರು ಮತ್ತು ವಿದ್ಯಾರ್ಥಿಗಳಿಗೆ ವಿಶೇಷ ಮಾರ್ಗದರ್ಶಕರ ಸಹಿತ ಪ್ರವಾಸ ವ್ಯವಸ್ಥೆ ಕಲ್ಪಿಸಬೇಕು. ಪ್ರವಾಸೋದ್ಯಮದಿಂದ ಬಂದ ಆದಾಯವನ್ನು ಸಂರಕ್ಷಣೆಗೆ ಮೀಸಲು ಮಾಡಬೇಕು.
- ಶಾಸನ ಮತ್ತು ದಾಖಲೆ ಸಂರಕ್ಷಣೆ: ಕಮಲ ಬಸದಿ ಕುರಿತು ಇರುವ ಶಾಸನಗಳು, ಐತಿಹಾಸಿಕ ದಾಖಲೆಗಳು ಮತ್ತು ಸಂಶೋಧನೆಗಳನ್ನು ಡಿಜಿಟಲ್ ರೂಪದಲ್ಲಿ ಸಂರಕ್ಷಿಸಬೇಕು. ಬಸದಿ ಕುರಿತ ವಿವರಣೆ ಫಲಕಗಳನ್ನು ಕನ್ನಡ ಹಾಗೂ ಇಂಗ್ಲಿಷ್‌ನಲ್ಲಿ ಅಳವಡಿಸಬೇಕು.
- ಕೋಟೆಯ ಸುತ್ತಲಿನ ಕಂದಕ (moat) ವನ್ನು ಸ್ವಚ್ಛಗೊಳಿಸಿ, ತ್ಯಾಜ್ಯ ವಸ್ತುಗಳನ್ನು ಹಾಕದಂತೆ ನಿಯಂತ್ರಣ ಕ್ರಮಗಳನ್ನು ಜಾರಿಗೊಳಿಸಬೇಕು. ಹಳೆಯ ಮರಗಳನ್ನು ಕಡಿತ ಮಾಡುವ ಬದಲು ಸಂರಕ್ಷಣೆ ಮತ್ತು ಪುನಃ ಅರಣ್ಯೀಕರಣ ಮಾಡಬೇಕು. ಕೋಟೆಯೊಳಗೆ ಹಾಗೂ ಸುತ್ತಮುತ್ತ ಹಸಿರು ವಲಯ (Green Belt) ಸೃಷ್ಟಿಸಬೇಕು.

**ಉಪಸಂಹಾರ:**

ಪಾರಂಪರಿಕ ತಾಣಗಳು ನಮ್ಮ ಇತಿಹಾಸದ ಪುಟಗಳಂತಿವೆ. ಅವುಗಳನ್ನು ಸಂರಕ್ಷಿಸುವುದು ನಮ್ಮ ಭವಿಷ್ಯದ ಪೀಳಿಗೆಗೆ ನೀಡುವ ಅತ್ಯಮೂಲ್ಯ ಉಡುಗೊರೆಯಾಗಿದೆ. ಶುದ್ಧೀಕರಣ, ರಾಸಾಯನಿಕ ಸಂರಕ್ಷಣೆ, ಬಲವರ್ಧನೆ, ಪರಿಸರ ನಿಯಂತ್ರಣ, ಕಾನೂನು ರಕ್ಷಣೆ, ಸಾಮಾಜಿಕ ಜಾಗೃತಿ ಮತ್ತು ಆಧುನಿಕ ತಂತ್ರಜ್ಞಾನ ಕ್ರಮಗಳು ಸೇರಿ ಪಾರಂಪರಿಕ ತಾಣಗಳನ್ನು ಉಳಿಸಲು ಸಹಾಯಕವಾಗುತ್ತವೆ. "ಸ್ಮಾರಕಗಳನ್ನು ಕಾಪಾಡುವುದು ಅಂದರೆ ನಮ್ಮ ಸಂಸ್ಕೃತಿ, ಇತಿಹಾಸ ಮತ್ತು ಪರಂಪರೆಯನ್ನು ಉಳಿಸುವುದು" ಎಂಬುದನ್ನು ಮರೆಯಬಾರದು. ಸರ್ಕಾರ, ಸಮಾಜ ಮತ್ತು ಪ್ರತಿಯೊಬ್ಬ ನಾಗರಿಕರು ಕೈಜೋಡಿಸಿದಾಗ ಮಾತ್ರ ಈ ಅಮೂಲ್ಯ ಪರಂಪರೆಯನ್ನು ಭವಿಷ್ಯಕ್ಕೆ ಕಾಪಾಡಿ ಕೊಡಲು ಸಾಧ್ಯ. ಆದ್ದರಿಂದ ಪಾರಂಪರಿಕ ತಾಣಗಳನ್ನು ಎಲ್ಲರೂ ಸೇರಿಕೊಂಡು ರಕ್ಷಿಸಬೇಕಾಗಿದೆ.

## ಪರಾಮರ್ಶನ ಗ್ರಂಥಗಳು:


1. Sethi K (Summer 2007) "Forts of Eastern India with special reference to Orissa" Teaching South Asia, an internet journal of Pedagogy Vol III.
2. De Souza R (December 2001) "Forts of Maharashtra" Environment Indian Institute of Architects Journal Vol 66 Pg 13.
3. Mehrotra R (Fall 2004) "Constructing cultural significance: looking at Bombay's historic fort area" Future Anterior Vol 1 Number 2.
4. Rupali D Kavatkar, "Study of The Need to Conserve the Belgaum Fort Precinct".
5. ನಾಗಭೂಷಣ ಎಸ್.ಎಮ್., 2018, "Cultural History Of Belagavi"
6. ಗೋಪಾಲ್ ಆರ್., (2010), "ಬೆಳಗಾವಿ ಜಿಲ್ಲೆಯ ಇತಿಹಾಸ ಮತ್ತು ಪುರಾತತ್ವ".
7. ಅಶ್ವತ್ಥಪ್ಪ ಕೆ. ಎನ್., (2014), ಭಾರತದಲ್ಲಿ ಪ್ರವಾಸೋದ್ಯಮ ಇತಿಹಾಸ, ಲಕ್ಷ್ಮೀ ಮುದ್ರಣಾಲಯ, ಚಾಮರಾಜಪೇಟೆ, ಬೆಂಗಳೂರು.


**Funding:**

This study was not funded by any grant.

**Conflict of interest:**

The Authors have no conflict of interest to declare that they are relevant to the content of this article.

**About the License:**

© The Authors 2024. The text of this article is open access and licensed under a Creative Commons Attribution 4.0 International License.